ಪಂಚಾಯತಿ ಚುನಾವಣೆಗಳಲ್ಲಿ ಹಿಂದುಳಿದ ಉಮೇದುವಾರರಿಗೆ ಆದಾಯ ಮಿತಿ ಸರ್ಟಿಫಿಕೇಟ್.

100 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ರಾಜ್ಯದಲ್ಲಿ ಪಂಚಾಯತ್ ಚುನಾವಣೆಗಳಲ್ಲಿ ಹಿಂದುಳಿದ ವರ್ಗಗಳಿಂದ ಸ್ಪರ್ಧಿಸಬೇಕಾದ್ದಲ್ಲಿ ಆದಾಯಮಿತಿ ಸರ್ಟಿಫಿಕೇಟನ್ನು ಕಡ್ಡಾಯಗೊಳಿಸಲು ಕಾರಣಗಳೇನು;

(ಆ) ಮೇಲ್ಕಂಡ ಕಡ್ಡಾಯವನ್ನು ನಿಗಧಿ ಪಡಿಸುವ ಮುನ್ನ ಕಾನೂನು ಇಲಾಖೆಯಿಂದ ಅಭಿಪ್ರಾಯ ಪಡೆಯಲಾಗಿರುವುದೇ;

(ಇ) ಹಾಗಿದ್ದಲ್ಲಿ, ಅದರ ವಿವರಗಳೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು): (ಅ) ಹೊಸ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಹಿಂದುಳಿದ ವರ್ಗಗಳೆಂದರೆ ಸಮಾಜ ಕಲ್ಯಾಣ ಇಲಾಖೆಯ ಆದೇಶ ಸಂಖ್ಯೆ ಎಸ್‌ಡಬ್ಲ್ಯುಎಲ್ 66 ಬಿಎಸಿ 86 ದಿನಾಂಕ 13.10.1986 ರಲ್ಲಿ ಅಥವಾ ಕಾಲ ಕಾಲಕ್ಕೆ ಹೊರಡಿಸಬಹುದಾದಂತಹ ಇತರ ಆದೇಶದಲ್ಲಿ ಸರ್ಕಾರವು ಅಧಿಸೂಚಿಸಬಹುದಾದಂತಹ ಹಿಂದುಳಿದ ವರ್ಗಗಳು. ಆದ್ದರಿಂದ ಸದರಿ ಆದೇಶದಲ್ಲಿ ಆದಾಯ ಮಿತಿ ಸರ್ಟಿಫಿಕೇಟ್ ಅವಶ್ಯಕವಾಗಿರುವುದರಿಂದ ಪಂಚಾಯಿತಿ ಚುನಾವಣೆಗಳಿಗೂ ಅಂತಹ ಸರ್ಟಿಫಿಕೇಟ್ ಕಡ್ಡಾಯವಾಗಿರುತ್ತದೆ.

(ಆ) ಮತ್ತು (ಇ) ಕರ್ನಾಟಕ ಪಂಚಾಯತ್ ರಾಜ್ (ಹಿಂದುಳಿದ ವರ್ಗಗಳ) ನಿಯಮಗಳು 1993ನ್ನು ರಚಿಸುವಾಗ ಕಾನೂನು ಇಲಾಖಾ ಅಭಿಪ್ರಾಯ ಪಡೆಯಲಾಗಿದೆ.

ಗುಲ್ಬರ್ಗಾ ಜಿಲ್ಲೆಯ ಪ್ರಾಥಮಿಕ ಸಹಕಾರಿ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕಿನಿಂದ ಸಾಲ ಪಡೆಯುವ ರೈತರು ತಮ್ಮ ಜಮೀನಿನ ಮಾರ್ಟ್‌ಗೇಜ್ (ಅಡಮಾನ) ಮಾಡುವಾಗ ನೋಂದಣಿಯ ಶುಲ್ಕ ಹೊರೆಯಾಗಿ ಮನ್ನಾ ಮಾಡುವ ಕುರಿತು.

211 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಕಂದಾಯ ಹಾಗೂ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಪ್ರಾಥಮಿಕ ಸಹಕಾರ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಲ್ಲಿ ರೈತರು ಹತ್ತು ಸಾವಿರ ಮೇಲ್ಪಟ್ಟು ಸಾಲ ಪಡೆಯಬೇಕಾದರೆ ತಮ್ಮ ಜಮೀನಿನ ಮಾರ್ಟ್‌ಗೇಜ್‌ಗಾಗಿ ನೋಂದಣಿ ಮಾಡುವ ಫೀ ಹಣ ಇತ್ಯಾದಿ ವಿಚ್ಚುಗಳಾಗಿ ಸಾಲ ಪಡೆಯುವುದು ರೈತರಿಗೆ ಹಣ ಭಾರ ಹೆಚ್ಚಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹತ್ತು ಸಾವಿರಕ್ಕಿಂತ ಮೇಲ್ಪಟ್ಟು ಸಾಲ ಪಡೆಯಲು ರೈತನಿಗೆ ನೋಂದಣಿಯ ಫೀ ಇತ್ಯಾದಿ ವಿಚ್ಚುಗಳು ಹೆಚ್ಚಾದರೆ ಪ್ರಾಥಮಿಕ ಕೃಷಿ ಹಾಗೂ ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಪಡೆಯುವುದು ಅಥವಾ ಸಾಹುಕಾರರಿಂದ ಸಾಲ ಪಡೆಯುವುದು ಸಮಾನವಾಗುವುದಿಲ್ಲವೇ ;

(ಇ) ಆ ಸಾಲ ಪಡೆಯುವುದಕ್ಕಾಗಿ ನೋಂದಣಿಯ ಫೀ ಮನ್ನಾ ಮಾಡಿ ಬಡ ರೈತರಿಗೆ ಆ ಸಾಲವನ್ನು ಪಡೆಮ ತಮ್ಮ ಒಕ್ಕಲುತನ ಸುಧಾರಿಸಲು ಅನುಕೂಲ ಮಾಡಿಕೊಡಲಾಗುವುದೇ?